**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.1/2022

**PW**. 5

**CW**. 10

**ಸಾಕ್ಷಿಯ ಹೆಸರು -ಸೋಮಶೇಖರ ಎಂ**

**ತಂದೆಯ ಹೆಸರು -ಮುನಿಸ್ವಾಮಿ**

**ವಯಸ್ಸು -50 ವರ್ಷಗಳು** ದಿನಾಂಕ 30-06-2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ,**

**ವಾಸಸ್ಥಳ -ಮೈಸೂರು**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ನಾನು ಸೆಪ್ಟೆಂಬರ್ 2017 ರಿಂದ ನವೆಂಬರ್ 2019 ರವರೆಗೆ ಮೈಸೂರಿನ ಗಣಿ ಮತ್ತು ಭೂ ಇಲಾಖೆಯಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದೇನೆ.

ದಿಃ 17-09-2019 ರ ಬೈಲುಕುಪ್ಪೆ ಪೊಲೀಸರ ಮನವಿ ಮೇರೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿರಿಯಾಪಟ್ಟಣ ತಾಲ್ಲೂಕು ಹಾರನಹಳ್ಳಿ ಹೋಬಳಿ ಮುತ್ತಗೂರು ಗ್ರಾಮದ ಸರ್ವೇ ನಂ 7 ರಲ್ಲಿ ಸುಬ್ರಮಣಿ ರವರ ಜಮೀನಿಗೆ ಸಂಬಂಧಿಸಿದಂತೆ ನಾವು ನಮ್ಮ ಇಲಾಖೆಯಿಂದ ಗಣಿಗಾರಿಕೆ ನಡೆಸಲು ಯಾವುದೇ ಅನುಮತಿ ನೀಡಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತೇನೆ. ಸದರಿ ಮಾಹಿತಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**SC No.1/2022**
**PW.5**

**ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ-**

ಪಿರಿಯಾಪಟ್ಟಣ ತಾಲ್ಲೂಕು ಹಾರನಹಳ್ಳಿ ಹೋಬಳಿ ಮುತ್ತಗೂರು ಗ್ರಾಮದ ಸರ್ವೇ ನಂ 7 ರ ಆರ್ ಟಿ ಸಿಯನ್ನು ನಾನು ನೋಡಿಲ್ಲ. ಸದರಿ ಜಮೀನು ಯಾರ ಹೆಸರಿನಲ್ಲಿದೆ ಎಂದು ದಾಖಲೆಯನ್ನು ನೋಡಿಲ್ಲ. ನಮ್ಮ ಇಲಾಖೆಯ ದಾಖಲೆಗಳಲ್ಲಿ ಗಣಿಗಾರಿಕೆ ನಡೆಸಲು ನೀಡಿರುವ ಪರವಾಣಿಗೆಯ ಪ್ರತಿಯನ್ನು ನೋಡಿ ನಿಪಿ-5 ಅನ್ನು ನೀಡಿದ್ದೇನೆ. ಚಾಸಾ-1 ನಮ್ಮ ಇಲಾಖೆಯ ಅಧಿಕಾರಿ ಎಂದರೆ ಸರಿ . ನಾನು ಯಾವುದೇ ದಾಖಲೆಗಳನ್ನು ನೋಡದೇ ನಿಪಿ-5 ಅನ್ನು ನೀಡಿ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.